ಧಾರವಾಡದ ಕಲಾಲೋಕದಲ್ಲಿ ಬಿ. ಮಾರುತಿ ಅವರದು ಚಿರಪರಿಚಿತ ಹೆಸರು. ಈ ಮೊದಲು ಕ್ರೀಡಾ ಸಾಮಗ್ರಿಗಳ ಮಾರಾಟಗಾರರಾಗಿದ್ದ ಅವರು, ಪ್ರಸ್ತುತ ಗ್ರಾಫಿಕ್ ಡಿಸೈನ್‌ನಲ್ಲಿ ಸಿದ್ಧಹಸ್ತರು. ಹೊಟ್ಟೆಪಾಡಿಗಾಗಿ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದರಾದರೂ ಅವರ ಮನಸ್ಸು ಮಾತ್ರ ಕಲಾಲೋಕದತ್ತ ವಾಲುತ್ತಲೇ ಇತ್ತು. ನಿತ್ಯ ಗ್ರಾಫಿಕ್ ಡಿಸೈನ್ ಮಾಡುತ್ತಿದ್ದ ಅವರು, ಲಾಕ್‌ಡೌನ್ ಸಮಯದಲ್ಲಿ ಮತ್ತೆ ಬ್ರಷ್ ಹಿಡಿದು ಅಪ್ಪಟ ಕಲಾವಿದರಾಗಿದ್ದಾರೆ.

‘ಕಲಾವಿದ ಆಗಬೇಕೆಂದು ಅಂದುಕೊಂಡವನಲ್ಲ. ಸಾಂಪ್ರದಾಯಿಕವಾಗಿ ಚಿತ್ರಕಲೆಯನ್ನೂ ಕಲಿತಿಲ್ಲ. ಆಸಕ್ತಿ, ಹವ್ಯಾಸದಿಂದಾಗಿ ಕಲಾವಿದನಾಗಿದ್ದೇನೆ’ ಎನ್ನುತ್ತಾರೆ ಮಾರುತಿ.

‘ಗ್ರಾಫಿಕ್ ಡಿಸೈನ್ ಮೂಲಕ ಪುಸ್ತಕ, ನಿಯತಕಾಲಿಕೆ, ಕ್ಯಾಲೆಂಡರ್ ಹಾಗೂ ಆಹ್ವಾನ ಪತ್ರಿಕೆಗಳ ಮುಖಪುಟ ವಿನ್ಯಾಸ ಮಾಡುತ್ತಿದ್ದೆ. ಆಕಸ್ಮಿಕವಾಗಿ ಕಲೆಯತ್ತ ಆಕರ್ಷಿತನಾದೆ. ಈಗ ಅದೇ ವೃತ್ತಿಯಾಗಿದೆ. ಕೊರೊನಾ ಸಂದರ್ಭದಲ್ಲಿ ಗ್ರಾಫಿಕ್ ಡಿಸೈನ್‌ಗೆ ಬೇಡಿಕೆ ಕಡಿಮೆಯಾದಾಗ ಚಿತ್ರಕಲೆಯತ್ತ ಆಸಕ್ತಿ ಹೊರಳಿತು. ಈಗ ಅದೇ ರುಚಿಸಿದೆ. ದಿನದಿಂದ ದಿನಕ್ಕೆ ಹೊಸ ಪ್ರಯೋಗಕ್ಕೆ ಒಡ್ಡಿಕೊಳ್ಳುವಂತೆ ಮಾಡಿದೆ. ಬಗೆದಷ್ಟು ಆಳ ದೊರಕುತ್ತಲೇ ಇದೆ’ ಎಂದು ತಮ್ಮ ಚಿತ್ರಕಲೆಯ ನಂಟಿನ ಕುರಿತು ಹೇಳುತ್ತಾರೆ.

‘ಬಳ್ಳಾರಿ ನಮ್ಮೂರು. ಹಂಪಿಯನ್ನು ನೋಡುತ್ತಾ ಬೆಳೆದವನು ನಾನು. ಅಲ್ಲಿಯ ಕಲ್ಲು–ಬಂಡೆಗಳನ್ನು ನೋಡಿ ಚಿತ್ರಬಿಡಿಸಲು ಆರಂಭಿಸಿದಾಗ ಏನೋ ಅವ್ಯಕ್ತ ಖುಷಿ ದೊರೆಯುತ್ತಿತ್ತು. ಆ ಖುಷಿ ಈಗ ಚಿತ್ರಕಲೆಯ ಮೂಲಕ ಮತ್ತೆ ದೊರೆಯುತ್ತಿದೆ. ಅಮೂರ್ತ ಕಲೆ ರಚನೆಯಂತೆ, ಪ್ರಾಕೃತಿಕ ಚಿತ್ರಗಳನ್ನು ಬಿಡಿಸುವುದೂ ಇಷ್ಟ. ಎರಡೂ ಬಗೆಯ ಚಿತ್ರಕಲೆಗಳು ವಿಭಿನ್ನ ಯೋಚನೆ,



